**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**
**ಎಫ್ ಡಿ ಪಿ ಸಂಖ್ಯೆ : 15/2022**

**ಸಿಡಬ್ಲ್ಯೂ- :- 01**

| | |
|---|---|
| ಹೆಸರು | ಹೆಚ್ ಎಂ ವೆಂಕಟರಾಜು |
| ತಂದೆ ಹೆಸರು | ಮೂಡಲಯ್ಯ |
| ವಯಸ್ಸು | 48 |
| ಉದ್ಯೋಗ | ತಾಲ್ಲೂಕು ಸರ್ವೇಯರ್ |
| ವಿಳಾಸ | ಮಾಗಡಿ |

**ದಿನಾಂಕ: 28.08.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :-**

ಮಾನ್ಯ ನ್ಯಾಯಾಲಯದಿಂದ ಕಡತಗಳನ್ನು ಸ್ವೀಕರಿಸಿದ ನಂತರ ದಿನಾಂಕ 22.09.2023 ರಂದು ವಾದಿ ಮತ್ತು ಪ್ರತಿವಾದಿಗಳಿಗೆ ಸ್ಥಳದಲ್ಲಿ ಹಾಜರಿರುವಂತೆ ನೋಟೀಸನ್ನು ನೀಡಿರುತ್ತೇನೆ. ನ್ಯಾಯಾಲಯದ ಆದೇಶದಂತೆ ವಿಸ್ತೀರ್ಣವನ್ನು ಅಳತೆ ಮಾಡಿ ಹಾಗೂ ಡಿವೈಡ್ ಮಾಡಿ ವರಧಿಯನ್ನು ಸಲ್ಲಿಸಿರುತ್ತೇನೆ. ಸದರಿ ಅಳತೆಯ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರು ಇದ್ದರು. ಪ್ರತಿವಾದಿಗಳು ಅಳತೆಯ ಕಾಲದಲ್ಲಿ ಹಾಜರು ಇದ್ದರು ಹಾಗೂ ಸದರಿ ಅಳತೆಯ ಕಾರ್ಯ ಮುಗಿದ ನಂತರ ಹೇಳಿಗೆಗೆ ಸಹಿ ಹಾಕದೆ ಹೋಗಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳಿಗೆ ನೀಡಿದ ನೋಟೀಸ್ ಹಾಗೂ ಅಂಚೆ ರಸೀದಿಗಳನ್ನು ಕ್ರಮವಾಗಿ ನಿಸಿ-01, ನಿಸಿ-02, ನಿಸಿ-03, ನಿಸಿ-04 ಮತ್ತು ನಿಸಿ-05 ಎಂದು ಗುರುತಿಸಲಾಯಿತು. ನಿವೇದನೆಯನ್ನು ನಿಸಿ-06 ಎಂದು ಗುರುತಿಸಲಾಯಿತು. ಸ್ಕೆಚ್ ಅನ್ನು ನಿಸಿ-07 ಎಂದು ಗುರುತಿಸಲಾಯಿತು. ವರಧಿಯನ್ನು ನಿಸಿ-08 ಎಂದು ಗುರುತಿಸಲಾಯಿತು.

**ಪಾಟೀಸವಾಲುಃಃ ಎದುರುದಾರರ ಪರ ಶ್ರೀ ಎಂ ಆರ್ ಆರ್ ವಕೀಲರಿಂದಃ**

ಎಷ್ಟು ವರ್ಷಗಳಿಂದ ಸರ್ವೇಯರ್ ಎಂದು ಕೆಲಸ ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿ 1998 ರಿಂದ ಎಂದು ನುಡಿಯುತ್ತಾರೆ. ಮಾಗಡಿಯಲ್ಲಿ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿ 2020 ರಿಂದ ಎಂದು ನುಡಿಯುತ್ತಾರೆ. ಈ ಹಿಂದೆ ನ್ಯಾಯಾಲಯದ ಆದೇಶದಂತೆ ನೀವು ಸರ್ವೆ ಮಾಡಿದ ಬಗ್ಗೆ ನಿಮಗೆ ಅನುಭವ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಷ್ಟು ದಿನಗಳ ಮುಂಚಿತವಾಗಿ ನೋಟೀಸ್ ?ಕೊಡಬೇಕು ಎಂದು ನಿಯಮ ಇದೆಯೆ ಎಂದರೆ ಸಾಕ್ಷಿ ಹೌದು 7 ದಿನಗಳ ಮುಂಚಿತವಾಗಿ ನೋಟೀಸ್ ಕೊಡಬೇಕು ಎಂದು ನಿಯಮ ಇದೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಸ್ಥಳಕ್ಕೆ ಬರುತ್ತೇವೆ ಎಂದು ನೋಟೀಸ್ ?ನೀಡಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ 22.09.2023 ರಂದು ಎಂದು ನುಡಿಯುತ್ತಾರೆ. ಎಲ್ಲಾ ಪಕ್ಷಗಾರರಿಗೂ ನೋಟೀಸ್ ಜಾರಿಯಾಗಲಿ ಎಂದು ಸದರಿ 7 ದಿನಗಳ ಕಾಲ ಸಮಯ ಕೊಡುತ್ತೀರಿ ಹಾಗೂ ಅಷ್ಟರಲ್ಲೇ ನಿಮಗೆ ಅಂಚೆ ಸ್ವೀಕೃತಿ ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸ್ವೀಕೃತಿ ಬಂದ ನಂತರವೇ ನೀವು ಸ್ಥಳಕ್ಕೆ ಹೋಗುವುದು ಎಂದರೆ ಸಾಕ್ಷಿ ಇಲ್ಲ ನಿಗಧಿ ಪಡಿಸಿದ ದಿನಾಂಕದಂದೇ ಹೋಗುತ್ತೇವೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ?ನೀಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾರು ಯಾರಿಗೆ ನೋಟಿಸ್ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ವೆಂಕಟಲಕ್ಷ್ಮಮ್ಮ ಬಿನ್ ನರಸಿಂಹಯ್ಯ @ ಕರಿಯಣ್ಣ, ಪ್ರತಿವಾದಿಗಳ ಕ್ರಮಾಂಕ 1 ರಿಂದ 8 ರವರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಎಲ್ಲಾ ಪಕ್ಷಗಾರರಿಗೂ ನೋಂದಾಯಿತ ಅಂಚೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಲ್ಲಾ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರು

ಪಡಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾಗಮ್ಮ, ಗಂಗಮ್ಮ ಮತ್ತು ಶಾರಧಮ್ಮ ರವರಿಗೆ ನೋಟೀಸ್ ಕೊಟ್ಟ ಬಗ್ಗೆ ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು ಉಳಿದವರಿಗೆ ನೋಟೀಸ್ ಕೊಟ್ಟ ಬಗ್ಗೆ ಅಂಚೆ ರಸೀದಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಉಳಿದ ಅಂಚೆ ರಸೀದಿಗಳು ಮಿಸ್ ಪ್ಲೇಸ್ ಆಗಿರುತ್ತವೆ ಎಂದು ನುಡಿಯುತ್ತಾರೆ. ನಿಸಿ-05 ಶಾರಧಮ್ಮ, ನೆಲಮಂಗಲ ವಿಳಾಸಕ್ಕೆ ಕಳುಹಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಸಿ-05 ರಲ್ಲಿ ಇರುವ ಶಾರಧಮ್ಮ ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬೇರೆ ಅಂಚೆ ರಿಸೀದಿಯನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ ಕಣ್ತಪ್ಪಿನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಸಿ-3 ಮತ್ತು 4 ರ ಪ್ರಕಾರ ನೀವು ನೋಟೀಸನ್ನು ದಿನಾಂಕ 20.09.2023 ರಂದು ಅಂದರೆ ಸ್ಥಳಕ್ಕೆ ಹೋಗುವ 2 ದಿನಗಳ ಮೊದಲು ನೀಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂದರೆ ನೀವು ಸರ್ವೆ ಮ್ಯಾನ್ಯುಯಲ್ ಪ್ರಕರ 7 ದಿನಗಳ ಮುಂಚಿತವಾಗಿ ನೋಟೀಸ್ ಕೊಡಬೇಕಿತ್ತು ಆದರೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸ್ಥಳಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ 12.30 ಗಂಟೆಗೆ ಎಂದು ನುಡಿಯುತ್ತಾರೆ. ನಿಮ್ಮ ವರಧಿಯಲ್ಲಿ ಇಂಥಹ ದಿನ , ತಾರೀಕು ಮತ್ತು ಸಮಯದಂದು ಹೋಗಿರುತ್ತೇನೆ ಎಂದು ವರಧಿಯಲ್ಲಿ ಬರೆದಿರುತ್ತದೆಯೆ ಎಂದರೆ ಸಾಕ್ಷಿ ನಮೂದು ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸರ್ವೆಗೆ ಹೋಗುವ ಮೊದಲು ಸಂಬಂಧಪಟ್ಟ ಇಲಾಖೆಯಿಂದ ದಾಖಲೆಗಳನ್ನು ಪಡೆದುಕೊಳ್ಳಲು ಮನವಿ ಪತ್ರ ನೀಡಿರುತ್ತೀರಾ ಎಂದರೆ ಸಾಕ್ಷಿ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ದಾಖಲೆಗಳನ್ನು ನೀವು

ತೆಗೆದುಕೊಂಡು ಹೋಗಿದ್ದಿರಿ ಎಂದರೆ ಸಾಕ್ಷಿ ಆರ್ ಆರ್ ಪಕ್ಕ, ಎಡಬದಿ ಮತ್ತು ಬಲಬದಿಯ ನಕಲು, ಆಕಾರ್ ಬಂಧ್ ಕ್ಷೇತ್ರ ಹಾಗೂ ಇತರ ದಾಖಲೆಗಳು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳ ಮೂಲ ಪ್ರತಿ ಒಯ್ಯಲು ಬರುವುದಿಲ್ಲ, ಅದರ ಜೆರಾಕ್ಸ್ ? ಪ್ರತಿಯನ್ನು ತೆಗೆದುಕೊಂಡು ಹೋಗುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ವರಧಿಯಲ್ಲಿ ಸದರಿ ದಾಖಲೆಗಳ ಬಗ್ಗೆ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನಿಸಿ-1 ರನೋಟೀಸನ್ನು ಯಾರ ದಿನಾಂಕದಂದು ಜಾರಿ ಮಾಡಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ 22.09.2023 ರ 2 ದಿವಸಗಳ ಮುಂಚೆ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ನಲ್ಲಿ ಇಂಥಹ ದಿನಾಂಕದಂದು ಜಾರಿ ಮಾಡಿರುತ್ತೇವೆ ಎಂದು ಎಲ್ಲಿಯೂ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಸಿ-1 ರ ನೋಟೀಸನ್ನೇ ನೀವು ಪಕ್ಷಗಾರರಿಗೆ ಜಾರಿ ಮಾಡಿದ್ದ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಸಿ-1 ರ ನೋಟೀಸ್ ಯಾರು ಯಾರರಿಗೆ ಜಾರಿಯಾಗಿದೆ ಎಂದು ಹೇಳಬಹುದೆ ಎಂದರೆ ಸಾಕ್ಷಿ ಮಾಯಮ್ಮ(ಆರ್-2), ಆರ್-1 ನರಸಿಂಹಯ್ಯ, ಆರ್-6 ನರಸಿಂಹಮೂರ್ತಿ, ಆರ್-3 ನಂಜಮ್ಮ, ಪುಟ್ಟರಾಜುರವರ ಪರವಾಗಿ ಅವರ ಅಣ್ಣ ನರಸಿಂಹಮೂರ್ತಿ ರವರಿಗೆ ಜಾರಿಯಾಗಿರುತ್ತದೆ. ಸದರಿ ನೋಟೀಸನ್ನು ನಮ್ಮ ಬಾಂದುಜವಾನರು ಜಾರಿ ಮಾಡಿರುತ್ತಾರೆ. ಸದರಿ ನೋಟಿಸ್ ಪ್ರತಿಗೆ ನೀವೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಉಳಿದ ಪ್ರತಿವಾದಿಗಳಿಗೆ ನೋಟೀಸ್ ಜಾರಿ ಆಗಿರುತ್ತದೆಯೆ ಎಂದರೆ ಸಾಕ್ಷಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನೋಟಿಸ್ ಉಳಿದ ಪ್ರತಿವಾದಿಗಳಿಗೆ ಜಾರಿಯಾದ ಬಗ್ಗೆ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿ ಅಂಚೆ ಮೂಲಕ ಹೋಗಿದ್ದು ಸ್ವೀಕೃತಿ ಕಟ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಉಳಿದ ಪ್ರತಿವಾದಿಗಳಿಗೆ ನೋಟಿಸ್ ಜಾರಿಯಾದ ಬಗ್ಗೆ

ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಮಿಸ್ ಆಗಿರಬಹುದು ನಂತರ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ.

ನಿಸಿ-1 ರಲ್ಲಿ ವಾದಿ ವೆಂಕಟಲಕ್ಷ್ಮಮ್ಮ ರವರಿಗೆ ಜಾರಿಯಾದ ಬಗ್ಗೆ ಸಹಿ ಪಡೆದಿರುತ್ತೀರಾ ಎಂದರೆ ಸಾಕ್ಷಿ 2 ಪುಟಗಳು ಇರುತ್ತವೆ ಆದರೆ ಸದರಿ ವಾದಿಯವರ ಸಹಿ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಸ್ಥಳದಲ್ಲೇ ತಯಾರು ಮಾಡಿರುತ್ತೀರೋ ಅಥವಾ ಕಛೇರಿಯಲ್ಲಿ ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿ ಸ್ಥಳದಲ್ಲಿ ಅಳತೆ ಮಾಡಿ ಕಛೇರಿಯಲ್ಲಿ ವರಧಿ ತಯಾರಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಳತೆ ಕಾರ್ಯಕ್ಕೆ ನೀವು ಒಬ್ಬರೆ ಹೋಗಿದ್ದಿರೋ ಅಥವಾ ನಿಮ್ಮ ಜೊತೆ ಯಾರಾದರೂ ಸಹಾಯಕರು ಬಂದಿದ್ದರೋ ಎಂದರೆ ಸಾಕ್ಷಿ ಬಾಂದುಜವಾನರು ಬಂದಿದ್ದರು ಎಂದು ನುಡಿಯುತ್ತಾರೆ. ಸದರಿಯವರ ಹೆಸರು ಶಿವಣ್ಣ ಎಂದು ನುಡಿಯುತ್ತಾರೆ, ಹಾಗೂ ಸದರಿಯವರು ಹೊರಗುತ್ತಿಗೆ ನೌಕರ ಎಂದು ನುಡಿಯುತ್ತಾರೆ. ಸದರಿ ವರಧಿಯಲ್ಲಿ ಶಿವಣ್ಣ ರವರು ಬಂದಿದ್ದರು ಎಂದು ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕಚ್ಚಾ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಕೊಡುವಹಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ಕಚ್ಚಾ ನಕಾಶೆ ತಯಾರು ಮಾಡಿದ ಬಗ್ಗೆ ಹಾಗೂ ಸಮಯದ ಬಗ್ಗೆ ವರಧಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಾದಿ ವೆಂಕಟಲಕ್ಷ್ಮಮ್ಮ ರವರ ಹೇಳಿಕೆಯನ್ನು ಪಡೆದಿದ್ದು ಸದರಿ ಹೇಳಿಕೆಯನ್ನು ಎಲ್ಲಿ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸ್ಥಳದಲ್ಲೇ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ವಾದಿ ಹಾಗೂ ಎಲ್ಲಾ ಪ್ರತಿವಾದಿಗಳು ಇದ್ದರು ಎಂದು

ನುಡಿಯುತ್ತಾರೆ. ಎಲ್ಲಾ ಪ್ರತಿವಾದಿಗಳು ಹಾಜರು ಇದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಸಿ-8 ರಲ್ಲಿ ಇರುವ ಹೇಮಲತ, ಜಯರಾಂ, ಪೂರ್ಣಿಮ , ಗೌರಮ್ಮ ಮತ್ತು ನರಸಯ್ಯ ರವರು ಈ ದಾವೆಯ ಪಕ್ಷಗಾರರು ಇರುವುದಿಲ್ಲ ಎಂದರೆ ಸಾಕ್ಷಿಯು ಪಕ್ಷಗಾರರು ಇರುವುದಿಲ್ಲ ಅವರು ವಾದಿಯ ಸಂಬಂಧಿಕರು ಎಂದು ನುಡಿಯುತ್ತಾರೆ. ಸದರಿ ನಿಸಿ-8 ರಲ್ಲಿ ಎರಡು ಹೆಬ್ಬೆಟ್ಟಿನ ಗುರುತುಗಳು ಇದ್ದು ಸದರಿ ಹೆಬ್ಬೆಟ್ಟಿನ ಗುರುತು ಯಾರದ್ದು ಎಂದು ಎಲ್ ಟಿ ಎಂ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಹೌದು ಬರೆದಿರುವುದಿಲ್ಲ ಆದರೆ ವಾದಿಯದ್ದು ಎಂದು ನುಡಿಯುತ್ತಾರೆ. ಸದರಿ 2 ಹೆಬ್ಬೆಟ್ಟಿನ ಗುರುತುಗಳು ವಾದಿಯದ್ದ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ನನ್ನ ಬಾಂದುಜವಾನರು ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೆಬ್ಬೆಟ್ಟು ಗುರುತುಗಳ ಕೆಳಗೆ before me ಎಂದು ಬರೆದಿದ್ದು ಸದರಿ ಹೆಬ್ಬೆಟ್ಟಿನ ಗುರುತುಗಳನ್ನು ನಿಮ್ಮ ಮುಂದೆ ಹಾಕಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬ್ಲಾಕ್ ನಂಬರ್ 1 ಉತ್ತರದ ಕಡೆಗೆ ವಾದಿಗೆ ಕೊಡಬೇಕು ಎಂದು ನ್ಯಾಯಾಲಯದಿಂದ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸಾಕ್ಷಿ ಆದೇಶ ಇದ್ದು ಚೆಕ್ಕುಬಂಧಿ ಇತ್ತು ಎಂದು ನುಡಿಯುತ್ತಾರೆ. ಸದರಿ ಬ್ಲಾಕ್ ನಂ.1 ವಾದಿಗೆ ಕೊಡಬೇಕು ಎಂದು ನ್ಯಾಯಾಲಯದಿಂದ ಎಲ್ಲಿ ಆದೇಶ ಇರುತ್ತದೆ ಎಂದರೆ ಸಾಕ್ಷಿ ಇಂಡೆಕ್ಸ್ ?ನಲ್ಲಿ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಉತ್ತರ ದಿಕ್ಕಿನ ಬ್ಲಾಕ್ ನಂಬರ್ 1 ಅನ್ನು ವಾದಿಗೆ ಕೊಡಿ ಎಂದು ನ್ಯಾಯಾಲಯದಿಂದ ಆದೇಶ ಇದೆಯೆ ಎಂದರೆ ಸಾಕ್ಷಿ ಎಫ್ ಡಿಪಿ ಯಲ್ಲಿ ಆದೇಶ ಇರುತ್ತದೆ ಎಂದು ನುಡಿಯುತ್ತಾರೆ, ಸದರಿ ಎಫ್ ಡಿ ಪಿ ಆದೇಶ ನೋಡಿಕೊಂಡೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬ್ಲಾಕ್ ನಂಬರ್ 2 ಪ್ರತಿವಾದಿಗಳ ಕ್ರಮಸಂಖ್ಯೆ 1, 2 ,

4 ರಿಂದ 7 ರವರಗೆ ಎಂದು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಸಿ-7 ರಲ್ಲಿ ಪ್ರತಿವಾದಿ 8 ಎಂದು ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಳತೆಯ ಕಾರ್ಯಗಳಲ್ಲಿ ಬಾಂದುಗಳನ್ನು ಪಿಕ್ಸ್ ?ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹದ್ದುಬಸ್ತು ಗಳನ್ನು ಪಿಕ್ಸ್ ?ಮಾಡಿಕೊಂಡ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನರಸಿಂಹಯ್ಯರವರು ಸದರಿ ಉತ್ತರ ದಿಕ್ಕಿನಲ್ಲಿ ನಮ್ಮ ತಂದೆ ತಾಯಿಯವರ ಗೋರಿಗಳು ಇದ್ದು ಅದನ್ನು ನಮ್ಮ ಭಾಗಕ್ಕೆ ಬಿಟ್ಟು ಕೊಡಿ ಎಂದು ಕೇಳಿದ್ದರ ಎಂದರೆ ಸಾಕ್ಷಿ ಯಾರೂ ಕೇಳಿರುವುದಿಲ್ಲ ಹಾಗೂ ಅಲ್ಲಿ ಯಾವುದೇ ಗೋರಿಗಳು ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ದಿನಾಕ 25.09.2023 ರಂದು ನರಸಿಂಹಯ್ಯ ರವರು ಭೂದಾಖಲೆ ತಾಂತ್ರಿಕ ಇಲಾಖೆಗೆ ನೀವು ಸರ್ವೆ ಕಾರ್ಯ ಮಾಡದೆ ಹಾಗೂ ಹೆಣ್ಣು ಮಕ್ಕಳಿಗೆ ನೋಟಿಸ್ ಕೊಡದೆ ತಂದೆ ತಾಯಿಯವರ ಸಮಾಧಿ ಇರುವ ಜಾಗ ನಮಗೆ ಬಿಟ್ಟು ವೆಂಕಟಲಕ್ಷ್ಮಮ್ಮ ರವರಿಗೆ ದಕ್ಷಿಣ ದಿಕ್ಕಿಗೆ ಅಳೆದುಕೊಡಿ ಎಂದು ನೋಟೀಸ್ ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಸ್ಥಳಕ್ಕೆ ಹೋಗಿರುವುದಿಲ್ಲ, ಹಾಗೂ ಅಳತೆ ಕಾರ್ಯ ಮಾಡಿರುವುದಿಲ್ಲ ಮತ್ತು ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಸುಳ್ಳು ವರಧಿಯನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಿಮ್ಮ ಮುಂದೆ ವಾದಿ ಯಾವುದೆ ಹೇಳಿಕೆಯನ್ನು ಕೊಟ್ಟಿರುವುದಿಲ ಹಾಗೂ ಉಳಿದ ಪ್ರತಿವಾದಿಗಳಿಗೆ ಹೇಳಿಕೆಯನ್ನು ಕೊಡಿ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ವಾದಿಯೊಂದಿಗೆ ಷರೀಕಾಗಿ ಸುಳ್ಳು ವರಧಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಪಾಟೀಸವಾಲು:: ಅರ್ಜಿದಾರರ ಪರ ಶ್ರೀ ಬಿ ಎಸ್ ವಕೀಲರಿಂದ::**

ನೀವು ಸರ್ವೆ ಕಾರ್ಯಕ್ಕೆ ಹೋದಾಗ ವೆಂಕಟಲಕ್ಷ್ಮಮ್ಮ ಮತ್ತು ನರಸಿಂಹಯ್ಯ ಹಾಜರು ಇದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶದಂತೆ ಭಾಗವನ್ನು ಯಾರು ಯಾರಿಗೆ ಹಂಚಿರುತ್ತೀರಿ ಎಂದರೆ ಸಾಕ್ಷಿ ವಾದಿ ವೆಂಕಟಲಕ್ಷ್ಮಮ್ಮ ಮತ್ತು ನರಸಿಂಹಯ್ಯ @ ಕರಿಯಣ್ಣ ಎಂದು ನುಡಿಯುತ್ತಾರೆ. ಸದರಿ ಸರ್ವೆ ಕಾಲದಲ್ಲಿ ಇತರ ಪ್ರತಿವಾದಿಗಳು ಎಲ್ಲಾ ಹಾಜರು ಇದ್ದರ ಎಂದರೆ ಸಾಕ್ಷಿ ಹಾಜರು ಇದ್ದರು ಎಂದು ನುಡಿಯುತ್ತಾರೆ. ಸದರಿಯವರು ಸಹಿ ಹಾಕಲು ಪ್ರಯತ್ನ ಪಟ್ಟಿರುತ್ತಾರಾ ಎಂದರೆ ಸಾಕ್ಷಿ ನಿರಾಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ವರಧಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**ನ್ಯಾಯಾಲಯದ ಪ್ರಶ್ನೆ::** 1. ಈಗ ಸಾಕ್ಷಿಗೆ ನಿಪಿ1 ಅನ್ನು ತೋರಿಸಲಾಗಿಸದರಿ ನಿಪಿ-1 ರಲ್ಲಿ " ಈ ಕೆಳಗಿನ ತಾರೀಕಿನ ದಿವಸ ಅಳತೆ ಮಾಡುವುದಾಗಿ ಈ ಮೂಲಕ ಪ್ರಸಿದ್ದ ಪಡಿಸಿದೆ " ಎಂದು ನಮೂದು ಇದ್ದು ಸದರಿ ನಿಪಿ-1 ರ ನೋಟೀಸಿನಲ್ಲಿ ದಿನಾಂಕ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿ ಫಾರಂ ನಂಬರ್ 2 ರಲ್ಲಿ ಸಹಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**